# ‘ಪಾರ್ಥ’ಸಾರಥಿಯ ಡೈವೋರ್ಸ್!

ಮದುವೆ ಅನ್ನುವುದೊಂದು ಕೂಡಿ ಬಾಳುವ ಒಪ್ಪಂದವೆ? ಅಥವಾ ಜನ್ಮ ಜನ್ಮದ ಅನುಬಂಧವೆ? ಅಥವಾ ಎರಡೂ ಹೌದೆ? ಕಮಲಹಾಸನ್ ಅವರಿಗೆ ಈ ಪ್ರಶ್ನೆ ಕೇಳಿದರೆ ಅವರ ಉತ್ತರ ಏನಿರಬಹುದು.. ಎನ್ನುವುದೊಂದು ಕುತೂಹಲ! ಭಾರತೀಯ ಚಿತ್ರರಂಗದಲ್ಲೇ ಅತ್ಯಂತ ಪ್ರತಿಭಾವಂತರ ಸಾಲಿನಲ್ಲಿ ನಿಲ್ಲುವ ನಟ, ನಿರ್ದೇಶಕ ಕಮಲ್. ಅವರ ಸೃಜನಶೀಲತೆ ವ್ಯಾಪ್ತಿಯೂ ದೊಡ್ಡದೇ. ಈ ಸೃಜನಶೀಲ ಗುಣವೇ ಅವರ ಮದುವೆಗಳ ವೈಫಲ್ಯಕ್ಕೆ ಕಾರಣ ಇರಬಹುದೆ.. ಎನ್ನುವುದು ಇನ್ನೊಂದು ಕುತೂಹಲ.

ಮದುವೆ ಎನ್ನುವುದು ಗಂಡು– ಹೆಣ್ಣಿನ ನಡುವಣ ವೈಯಕ್ತಿಕ ವಿಷಯ. ಯಾರು ಯಾರಿಗೆ ಯಾವ ಕಾರಣಕ್ಕೆ ವಿಚ್ಛೇದನ ಕೊಟ್ಟರು ಎನ್ನುವುದು ಎಷ್ಟೋ ಸಲ ಸ್ಪಷ್ಟವಾಗುವುದೇ ಇಲ್ಲ. 13 ವರ್ಷಗಳ ಕಾಲ ಒಟ್ಟಿಗೇ ಬದುಕಿದ ಕಮಲಹಾಸನ್ ಮತ್ತು ನಟಿ ಗೌತಮಿ ಅವರು ಇದೀಗ ಬೇರ್ಪಟ್ಟಿದ್ದಾರೆ. 13 ವರ್ಷಗಳೆಂದರೆ ಕಡಿಮೆ ಅವಧಿಯಲ್ಲ. ಅಷ್ಟೊಂದು ವರ್ಷಗಳ ಕಾಲ ಒಟ್ಟಿಗಿದ್ದರೆಂದರೆ ಮಾನಸಿಕವಾಗಿ ಅವರು ಒಟ್ಟಿಗಿದ್ದ ನಿಮಿಷಗಳನ್ನು ಲೆಕ್ಕ ಹಾಕಿ. ಆ ಯಾವ ನಿಮಿಷದಲ್ಲಿ ಅವರ ನಡುವೆ ಬಿಕ್ಕಟ್ಟು ಹುಟ್ಟಿರಬಹುದು? ವಿಚ್ಛೇದನದ ಬಗ್ಗೆ ಮೂರನೆಯವರು ಕಾಮೆಂಟು ಮಾಡುವುದು ಸುಲಭ. ಆದರೆ ಅದಕ್ಕೆ ನಿಜವಾದ ಕಾರಣ ಅವರಿಬ್ಬರಿಗೇ ಗೊತ್ತಿರುತ್ತದೆ.

ಇಂತಹ ಪ್ರಕರಣಗಳ ಬಗ್ಗೆ ಬರೆಯುವುದು ಸರಿಯಲ್ಲ. ಆದರೆ ಈ ಜೋಡಿ ಲಕ್ಷಾಂತರ ಸಿನಿಮಾ ಅಭಿಮಾನಿಗಳ ಹೃದಯದಲ್ಲಿ ಸ್ಥಾನ ಪಡೆದಿರುವುದರಿಂದ ಅವರ ನಗು, ಅಳು, ಮಾತು, ಕೇಕೆ, ತಪ್ಪು, ಸರಿ– ಎಲ್ಲವೂ ಸಾರ್ವಜನಿಕ ಚರ್ಚೆಯ ವಿಷಯ ಆಗುವುದು ಸಹಜ. ಕೆಲವು ತಾರಾಜೋಡಿಗಳು ವಿಚ್ಛೇದನದ ವಿಷಯವನ್ನು ಬೀದಿರಂಪ ಮಾಡುತ್ತಾರೆ. ಆದರೆ ಕಮಲ್– ಗೌತಮಿ ಹಾಗಲ್ಲ. ‘ನಾವು ಬೇರೆಯಾಗಿದ್ದೇವೆ’ ಎನ್ನುವುದನ್ನು ಟ್ವಿಟ್ಟರ್ ಮೂಲಕ ಬಹಿರಂಗ ಪಡಿಸಿದಾಗಲೂ ಗೌತಮಿ, ಕಮಲ್ ಬಗ್ಗೆ ಒಂದು ಗೌರವದ ಭಾವನೆಯನ್ನು ಇಟ್ಟುಕೊಂಡೇ ಬರೆದಿದ್ದಾರೆ. ಹಾಗೆಯೇ ಕಮಲ್ ಕೂಡಾ ‘ಈ ಬಗ್ಗೆ ನಾನು ಏನೂ ಹೇಳುವುದಿಲ್ಲ’ ಎಂದಿದ್ದಾರೆ. ಇಬ್ಬರ ವ್ಯಕ್ತಿತ್ವಗಳ ಕುರಿತ ಗೌರವವನ್ನು ಈ ಹೇಳಿಕೆಗಳು ಇಮ್ಮಡಿಸಿವೆ.

ಕಮಲ್ ಅವರಿಗಿದು ಮೂರನೇ ಅಧಿಕೃತ ವಿಚ್ಛೇದನ. 1978ರಲ್ಲಿ ಅವರು ಖ್ಯಾತ ನೃತ್ಯಗಾತಿ ವಾಣಿ ಗಣಪತಿ ಅವರನ್ನು ಮದುವೆ ಆದಾಗ ಕಮಲ್‌ಗಿನ್ನೂ 24 ವರ್ಷ ಅಷ್ಟೆ! ಕಮಲ್ ಅವರ ಸಂದರ್ಶನ ನಡೆಸಲು ಬಂದ ವಾಣಿ, ಬಳಿಕ ಪತ್ನಿಯಾದದ್ದೂ ಒಂದು ಸಿನಿಮಾ ಕಥೆಯಂತಿದೆ. 10 ವರ್ಷಗಳ ಅವರ ದಾಂಪತ್ಯ ಬೇರೆಯವರು ಕರುಬುವಂತೆಯೇ ಇತ್ತು. ಆದರೆ ಅದೇನಾಯಿತೋ ಗೊತ್ತಿಲ್ಲ, ಒಂದು ದಿನ ಘಟಸ್ಫೋಟ ಪ್ರಕಟಿಸಿದರು. ಅದೇ ವರ್ಷ ಕಮಲ್, ಬಾಲಿವುಡ್‌ನ ಸುಂದರ ನಟಿ ಸಾರಿಕಾ ಅವರನ್ನು ಮದುವೆಯಾದರು. ಆ ದಾಂಪತ್ಯವೂ 16 ವರ್ಷಗಳ ಕಾಲ ನಡೆಯಿತು. 1977ರಲ್ಲಿ ತೆರೆಗೆ ಬಂದ ‘ಪದಿನಾರು ವಯದಿನಿಲೆ’ ತಮಿಳು ಚಿತ್ರದಲ್ಲಿ ಅತ್ಯುತ್ತಮ ನಟನೆಗೆ ಫಿಲಂಫೇರ್ ಪ್ರಶಸ್ತಿ ಪಡೆದ ಕಮಲ್, 16 ವರ್ಷಗಳ ಎರಡನೆಯ ಸಂಸಾರದಲ್ಲೂ ತೃಪ್ತಿ ಕಾಣಲಿಲ್ಲವೆ ಎನ್ನುವುದೊಂದು ಪ್ರಶ್ನೆ ಅಭಿಮಾನಿಗಳನ್ನು ಆಗ ಕಾಡಿದ್ದು ಸುಳ್ಳಲ್ಲ. ಅದೂ ಆ ಸಂಸಾರದ ಮೂಲಕ ಶ್ರುತಿ ಮತ್ತು ಅಕ್ಷರಾ ಎಂಬ ಇಬ್ಬರು ಮುದ್ದಾದ ಹೆಣ್ಣು ಮಕ್ಕಳನ್ನು ಪಡೆದ ಬಳಿಕ ಈ ವಿಚ್ಛೇದನ ಅಗತ್ಯವಿತ್ತೆ.. ಎನ್ನುವ ಪ್ರಶ್ನೆ ಹಲವರದ್ದು. ಆಗಲೂ ಅಷ್ಟೆ– ಸಾರಿಕಾ ಗಂಟಲು ಹರಿದುಕೊಳ್ಳಲಿಲ್ಲ; ಕಮಲ್ ಕೂಡಾ ಸಾರ್ವಜನಿಕವಾಗಿ ಮಾತನಾಡಲಿಲ್ಲ.

ಗೌತಮಿಯವರ ಜತೆಗಿನ ಕಮಲ್ ಮದುವೆ ಸ್ವಲ್ಪ ಭಿನ್ನವೆಂದು ಭಾವಿಸಲು ಕಾರಣಗಳಿದ್ದವು. ಎರಡನೆ ಮದುವೆ ಮುರಿದುಕೊಂಡ ಒಂದು ವರ್ಷದ ಬಳಿಕ ಗೌತಮಿ ಜತೆಗೆ ‘ಕೂಡಿಕೆ’ ನಡೆಯಿತು. ಆಗಷ್ಟೆ ಗೌತಮಿ ಕ್ಯಾನ್ಸರ್‌ನಿಂದ ಚೇತರಿಸಿಕೊಳ್ಳುತ್ತಿದ್ದರು. ಇಬ್ಬರ ನಡುವಿನ ಗಟ್ಟಿ ಬಾಂಧವ್ಯಕ್ಕೆ ಕ್ಯಾನ್ಸರ್ ಕೂಡಾ ಕಾರಣವಾಗಿತ್ತು. ಕಮಲ್ ಅದಾಗಲೇ ಕ್ಯಾನ್ಸರ್ ರೋಗಿಗಳ ಆರೈಕೆ ಸಹಿತ ಹಲವು ಚಾರಿಟಿ ಕೆಲಸಗಳಲ್ಲಿ ತೊಡಗಿಕೊಂಡಿದ್ದರು. 2005ರಿಂದ ಜತೆಗಿದ್ದ ಗೌತಮಿ ಈಗ ಅನಿವಾರ್ಯವಾಗಿ ಬಿಟ್ಟು ಹೋಗಿದ್ದಾರೆ ಎಂದರೆ, ಎಲ್ಲೋ ಕಮಲ್ ಅವರದ್ದೇ ತಪ್ಪಿರಬಹುದೆ.. ಎನ್ನುವ ಅನುಮಾನ ಹಲವರದ್ದು.

‘ಹೆಣ್ಣು ಕಮಲ್ ಅವರ ದೊಡ್ಡ ದೌರ್ಬಲ್ಯ’ ಎನ್ನುವವರೂ ಇದ್ದಾರೆ. 70ರ ದಶಕದಲ್ಲೇ ನಟಿ ಶ್ರೀವಿದ್ಯಾ ಜತೆಗೆ ಕಮಲ್ ಸಂಬಂಧವಿತ್ತು ಎನ್ನುವ ಗುಲ್ಲು ಹರಡಿತ್ತು. ಸಾರಿಕಾ ಅವರಿಂದ ದೂರವಾದ ಬಳಿಕ ತನಗಿಂತ 22 ವರ್ಷ ಚಿಕ್ಕವಳಾಗಿದ್ದ ನಟಿ ಸಿಮ್ರಾನ್ ಜತೆ ಕಮಲ್ ಓಡಾಟ ಜೋರಾಗಿತ್ತು. ಆ ಸಂಬಂಧ ಸಿಮ್ರಾನ್ ಮದುವೆಯಿಂದಾಗಿ ಸ್ಥಗಿತಗೊಂಡಿತು. ಮಗಳು ಶ್ರುತಿ ಮತ್ತು ಪತ್ನಿ ಗೌತಮಿ ನಡುವಣ ತೀವ್ರ ಭಿನ್ನಾಭಿಪ್ರಾಯಗಳೇ ಕಮಲ್ ಮೂರನೆ ಮದುವೆ ಮುರಿಯಲು ಕಾರಣ ಎಂಬ ಸುದ್ದಿ ಹಬ್ಬಿದೆ. ಅದೇನೇ ಇರಲಿ, ಕಮಲ್ ಪ್ರತಿಭೆಯ ಬಗ್ಗೆ ಎರಡನೇ ಮಾತೇ ಇಲ್ಲ. 3 ರಾಷ್ಟ್ರಪ್ರಶಸ್ತಿ, 19 ಫಿಲಂಫೇರ್ ಪ್ರಶಸ್ತಿಗಳ ಈ ಸರದಾರ, 2015ರಲ್ಲಿ ಪೋಥಿಸ್ ಜಾಹೀರಾತು ಬಿಟ್ಟರೆ, ಇನ್ಯಾವ ಕಮರ್ಷಿಯಲ್‌ನಲ್ಲೂ ನಟಿಸಿಲ್ಲ! ಪದ್ಮಶ್ರೀ, ಪದ್ಮಭೂಷಣ, ಫ್ರೆಂಚ್ ಚೆಲವರ್ ಮುಂತಾದ ಅತ್ಯುನ್ನತ ಪ್ರಶಸ್ತಿಗಳೆಲ್ಲವೂ ಹುಡುಕಿಕೊಂಡು ಬಂದವು. ಆದರೆ ಪರಮಕುಡಿಯಲ್ಲಿ ಹುಟ್ಟಿದ ಈ ಪಾರ್ಥಸಾರಥಿ (ಮೂಲ ಹೆಸರು) ಮದುವೆ ವಿಷಯದಲ್ಲಿ ಪಾರ್ಥನನ್ನೇ ಅನುಸರಿಸಿದ್ದು ಏಕೋ?

